**All India Radio: Bangalore**
**National Bulletin In Kannada**
**04.07.2025 / 7.35 am**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**04.07.2025 / 7.35 am**

<><*<><>*><>

ಮುಖ್ಯಾಂಶಗಳು :

೧. ಟ್ರಿನಿಡಾಡ್ ಮತ್ತು ಟೊಬಾಗೋ ಪ್ರವಾಸದಲ್ಲಿ ಪ್ರಧಾನಿ ನರೇಂದ್ರ ಮೋದಿ: ಭಾರತೀಯ ಸಮುದಾಯ ಉದ್ದೇಶಿ ಭಾಷಣ

೨. ರಕ್ಷಣಾ ಸಚಿವ ರಾಜನಾಥ್ ಸಿಂಗ್ ನೇತೃತ್ವದ ಸಭೆ: ಒಂದು ಲಕ್ಷ ಕೋಟಿ ರೂಪಾಯಿಗೂ ಅಧಿಕ ಮೊತ್ತದ ಪ್ರಸ್ತಾವನೆಗಳಿಗೆ ಅನುಮೋದನೆ

೩. ವಿಂಬಲ್ಡನ್ ಟೆನಿಸ್ ಟೂರ್ನಿ: ಭಾರತದ ಶ್ರೀರಾಮ್ ಬಾಲಾಜಿ - ಮೆಕ್ಸಿಕನ್ ನ ಮಿಗುಯೆಲ್ ರೆಯೆಸ್-ವರೆಲಾ ಜೋಡಿ ೨ನೇ ಸುತ್ತಿಗೆ

೪. ಸೂಪರ್ ಯುನೈಟೆಡ್ ರಾಪಿಡ್ ಅಂಡ್ ಬ್ಲಿಟ್ಜ್ ಚೆಸ್ ಟೂರ್ನಿ: ಐದು ಬಾರಿ ವಿಶ್ವಚಾಂಪಿಯನ್ ಮ್ಯಾಗ್ನಸ್ ಕಾರ್ಲ್ಸನ್ ಅವರನ್ನು ಪರಾಭವಗೊಳಿಸಿ ಸಂಚಲನ ಮೂಡಿಸಿದ ಡಿ. ಗುಕೇಶ್

><><><><><><><><><><

ಟ್ರಿನಿಡಾಡ್ ಮತ್ತು ಟೊಬಾಗೋದಲ್ಲಿ ಭಾರತೀಯ ಸಮುದಾಯ ಮಹತ್ವದ ಕೊಡುಗೆ ನೀಡುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಐದು ರಾಷ್ಟ್ರಗಳ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಟ್ರಿನಿಡಾಡ್ ಮತ್ತು ಟೊಬಾಗೋದಲ್ಲಿ ಭಾರತೀಯ ಸಮುದಾಯವನ್ನುದ್ದೇಶಿಸಿ ಮಾತನಾಡಿದರು. ನಮ್ಮ ಪೂರ್ವಜರು ಭರವಸೆಯಿಂದ ಮತ್ತು ಕಠಿಣ ಪರಿಶ್ರಮದಿಂದ ಕೆಲಸ ಮಾಡಿದ್ದಾರೆ. ಅವರು ತಮ್ಮ ಹೃದಯದಲ್ಲಿ ರಾಮಾಯಣ ಮಹಾಕಾವ್ಯವನ್ನು ಹೊತ್ತು ತಂದಿದ್ದರು. ಅವರೆಲ್ಲಾ ವಲಸಿಗರಲ್ಲ, ಕಾಲಾತೀತ ನಾಗರಿಕತೆಯ ಸಂದೇಶವಾಹಕರು ಎಂದು ಹೇಳಿದರು.

ಪ್ರಧಾನಿಯವರು ನಿನ್ನೆ ರಾತ್ರಿ ತಮ್ಮ ಐದು ರಾಷ್ಟ್ರಗಳ ಪ್ರವಾಸದ ಎರಡನೇ ಚರಣದಲ್ಲಿ ಟ್ರಿನಿಡಾಡ್ ಮತ್ತು ಟೊಬಾಗೋದ ಪೋರ್ಟ್ ಆಫ್ ಸ್ಪೇನ್ ತಲುಪಿದರು. ಟ್ರಿನಿಡಾಡ್ ಮತ್ತು ಟೊಬಾಗೋದ ಪ್ರಧಾನಿ ಕಮಲಾ ಪರ್ಸಾದ್-ಬಿಸ್ಸೆಸ್ಸರ್ ಅವರು ತಮ್ಮ ಸಂಪುಟದ ಸದಸ್ಯರು ಮತ್ತು ಇತರ ಹಲವಾರು ಗಣ್ಯರೊಂದಿಗೆ ಪೋರ್ಟ್ ಆಫ್ ಸ್ಪೇನ್‌ನ ವಿಮಾನ ನಿಲ್ದಾಣದಲ್ಲಿ ನರೇಂದ್ರ ಮೋದಿ ಅವರನ್ನು ಬರಮಾಡಿಕೊಂಡರು. ಪ್ರಧಾನಮಂತ್ರಿ ಅವರಿಗೆ ವಿಧ್ಯುಕ್ತವಾಗಿ ಗೌರವ ವಂದನೆ ನೀಡಲಾಯಿತು. ವಿಶೇಷ ಸಾಂಸ್ಕೃತಿಕ ಪ್ರದರ್ಶನಗಳೊಂದಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರನ್ನು ಬರಮಾಡಿಕೊಳ್ಳಲಾಯಿತು. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ನರೇಂದ್ರ ಮೋದಿ ಅವರು ಭಾರತೀಯರು ಹಲವಾರು ವರ್ಷಗಳ ಹಿಂದೆ ಟ್ರಿನಿಡಾಡ್ ಮತ್ತು ಟೊಬಾಗೋಗೆ ತೆರಳಿದ್ದರು. ಅವರು ಹಲವಾರು ಕ್ಷೇತ್ರಗಳಲ್ಲಿ ತಮ್ಮನ್ನು ತಾವು ಗುರುತಿಸಿಕೊಂಡಿದ್ದಾರೆ ಮತ್ತು ರಾಷ್ಟ್ರದ ಅಭಿವೃದ್ಧಿ ಪ್ರಯಾಣವನ್ನು ಶ್ರೀಮಂತಗೊಳಿಸುತ್ತಿದ್ದಾರೆ ಎಂದರು. ನರೇಂದ್ರ ಮೋದಿ ಅವರು ಪ್ರಧಾನಮಂತ್ರಿಯಾಗಿ ದೇಶಕ್ಕೆ ನೀಡಿದ ಮೊದಲ ಭೇಟಿ ಮತ್ತು ೧೯೯೯ ರ ನಂತರ ಟ್ರಿನಿಡಾಡ್ ಮತ್ತು ಟೊಬೆಗೊಗೆ ಪ್ರಧಾನಿ ಹಂತದ ಮೊದಲ ದ್ವಿಪಕ್ಷೀಯ ಪ್ರವಾಸವಾಗಿದೆ. ತಮ್ಮ ಎರಡು ದಿನಗಳ ಭೇಟಿಯ ಸಮಯದಲ್ಲಿ, ಪ್ರಧಾನಿಯವರು ಟ್ರಿನಿಡಾಡ್ ಮತ್ತು ಟೊಬೆಗೊ ಅಧ್ಯಕ್ಷರಾದ ಕ್ರಿಸ್ಟೀನ್ ಕಾರ್ಲಾ ಕಂಗಲೂ ಮತ್ತು ಪ್ರಧಾನಿ ಕಮಲಾ ಪರ್ಸಾದ್-ಬಿಸ್ಸೆಸ್ಸರ್ ಅವರೊಂದಿಗೆ ಮಾತುಕತೆ ನಡೆಸಲಿದ್ದಾರೆ. ಪ್ರಧಾನ ಮಂತ್ರಿ ಅವರು ಟ್ರಿನಿಡಾಡ್ ಮತ್ತು ಟೊಬೆಗೊ ಸಂಸತ್ತಿನ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

><><><><><><><><><><><

೫ ರಾಷ್ಟ್ರಗಳ ಪ್ರವಾಸದ ಮುಂದಿನ ಹಂತದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಜಾಗತಿಕ ದಕ್ಷಿಣದೊಂದಿಗೆ ಭಾರತದ ಸಂಬಂಧವನ್ನು ಬಲಪಡಿಸುವ ಗುರಿ ಹೊಂದಿರುವ ಮತ್ತು ಅಧ್ಯಕ್ಷ ಜೇವಿಯರ್ ಮಿಲಿ ಅವರ ಆಹ್ವಾನದ ಮೇರೆಗೆ ಅರ್ಜೆಂಟೀನಾಕ್ಕೆ ಭೇಟಿ ನೀಡಲಿದ್ದಾರೆ. ಅರ್ಜೆಂಟೀನಾ ಲ್ಯಾಟಿನ್ ಅಮೆರಿಕಾದಲ್ಲಿ ಭಾರತದ ಪ್ರಮುಖ ಆರ್ಥಿಕ ಪಾಲುದಾರ ಮತ್ತು ಜಿ ೨೦ಯಲ್ಲಿ ನಿಕಟ ಸಹಯೋಗಿಯಾಗಿದೆ. ಈ ಪ್ರವಾಸದಲ್ಲಿ ಇಂದು ಮತ್ತು ನಾಳೆ ಅರ್ಜೆಂಟೀನಾಕ್ಕೆ ಭೇಟಿ ನೀಡುತ್ತಿದ್ದು, ಇದು ೫೭ ವರ್ಷಗಳಲ್ಲಿ ಭಾರತೀಯ ಪ್ರಧಾನಿಯೊಬ್ಬರ ಮೊದಲ ದ್ವಿಪಕ್ಷೀಯ ಭೇಟಿಯಾಗಲಿದೆ.

ಜೊತೆಗೆ ಇದೊಂದು ಐತಿಹಾಸಿಕ ಸಂದರ್ಭವಾಗಿದೆ. ರಕ್ಷಣೆ, ಕೃಷಿ, ಗಣಿಗಾರಿಕೆ, ತೈಲ ಮತ್ತು ಅನಿಲ, ನವೀಕರಿಸಬಹುದಾದ ಇಂಧನ, ವ್ಯಾಪಾರ ಮತ್ತು ಹೂಡಿಕೆ ಮತ್ತು ಜನರಿಂದ ಜನರ ನಡುವಿನ ಸಂಬಂಧಗಳು ಸೇರಿದಂತೆ ಹಲವಾರು ಪ್ರಮುಖ ಕ್ಷೇತ್ರಗಳ ಮೇಲೆ ಕೇಂದ್ರೀಕರಿಸಿ, ನಡೆಯುತ್ತಿರುವ ಸಹಕಾರವನ್ನು ಪರಿಶೀಲಿಸಲು ಮತ್ತು ಪಾಲುದಾರಿಕೆಯನ್ನು ಹೆಚ್ಚಿಸುವ ಮಾರ್ಗಗಳನ್ನು ಅನ್ವೇಷಿಸಲು ಇಬ್ಬರು ನಾಯಕರು ದ್ವಿಪಕ್ಷೀಯ ಮಾತುಕತೆಗಳನ್ನು ನಡೆಸಲಿದ್ದಾರೆ.

><><><><><><><><><><><

ಬ್ರಿಕ್ಸ್ ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಪ್ರಮುಖ ವಿಷಯಗಳ ಕುರಿತು ಚರ್ಚಿಸಲಾಗುವುದು ಎಂದು ಬ್ರೆಜಿಲ್ ನಲ್ಲಿರುವ ಭಾರತೀಯ ರಾಯಭಾರಿ ದಿನೇಶ್ ಭಾಟಿಯಾ ಹೇಳಿದ್ದಾರೆ. ಜುಲೈ ೬ ಮತ್ತು ೭ ರಂದು ಬ್ರೆಜಿಲ್ ನ ರಿಯೊ ಡಿ ಜನೈರೊದಲ್ಲಿ ಬ್ರಿಕ್ಸ್ ಶೃಂಗಸಭೆ ನಡೆಯಲಿದೆ.ಆಕಾಶವಾಣಿಯೊಂದಿಗೆ ಮಾತನಾಡಿದ ದಿನೇಶ್ ಭಾಟಿಯಾ, ೧೭ ನೇ ಬ್ರಿಕ್ಸ್ ಶೃಂಗಸಭೆಯು ಜಾಗತಿಕ ಆಡಳಿತ ಸುಧಾರಣೆ, ಹವಾಮಾನ ಬದಲಾವಣೆ ಸವಾಲುಗಳು, ಕೃತಕ ಬುದ್ಧಿಮತ್ತೆ ಸೇರಿದಂತೆ ಇತರ ವಿಷಯಗಳ ಕುರಿತು ಚರ್ಚಿಸಲಿದೆ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಪ್ರಧಾನಿ ಅವರು ಬ್ರೆಜಿಲ್ ಅಧ್ಯಕ್ಷ ಲೂಯಿಜ್ ಇನಾಸಿಯೊ ಲುಲಾ ಡಿ ಸಿಲ್ವಾ ಅವರೊಂದಿಗೆ ದ್ವಿಪಕ್ಷೀಯ ಸಭೆ ನಡೆಸಲಿದ್ದಾರೆ ಎಂದು ಹೇಳಿದರು.

><><><><><><><><><><><

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರ ಅಧ್ಯಕ್ಷತೆಯಲ್ಲಿ ನಿನ್ನೆ ನಡೆದ ರಕ್ಷಣಾ ಖರೀದಿ ಮಂಡಳಿಯ ಸಭೆಯಲ್ಲಿ, ಒಂದು ಲಕ್ಷ ಕೋಟಿ ರೂಪಾಯಿಗೂ ಹೆಚ್ಚಿನ ಮೊತ್ತದ ಹತ್ತು ಬಂಡವಾಳ ಹೂಡಿಕೆ ಪ್ರಸ್ತಾವನೆಗಳಿಗೆ ಅನುಮೋದನೆ ನೀಡಲಾಗಿದೆ. ಇದರಲ್ಲಿ ಶಸ್ತ್ರಸಜ್ಜಿತ ವಾಹನಗಳು, ವಿದ್ಯುನ್ಮಾನ ಯುದ್ಧ ವ್ಯವಸ್ಥೆ, ಸಂಯೋಜಿತ ಸಾಮಾನ್ಯ ದಾಸ್ತಾನು ನಿರ್ವಹಣಾ ವ್ಯವಸ್ಥೆ ಮತ್ತು ಮೇಲ್ಮೈಯಿಂದ ವಾಯುಮಾರ್ಗಕ್ಕೆ ಚಿಮ್ಮುವ ಕ್ಷಿಪಣಿಗಳು ಸೇರಿವೆ. ಈ ಖರೀದಿಗಳು ಹೆಚ್ಚಿನ ಚಲನಶೀಲತೆ, ಪರಿಣಾಮಕಾರಿಯಾಗಿ ವಾಯುಮಾರ್ಗದ ರಕ್ಷಣೆ, ಉತ್ತಮ ಪೂರೈಕೆ ಸರಪಳಿ ನಿರ್ವಹಣೆ ಮತ್ತು ಸಶಸ್ತ್ರ ಪಡೆಗಳ ಕಾರ್ಯಾಚರಣೆಯ ಸನ್ನದ್ಧತೆಯನ್ನು ಹೆಚ್ಚಿಸುತ್ತದೆ. ಜೊತೆಗೆ, ಇವು ನೌಕಾ ಮತ್ತು

ವ್ಯಾಪಾರಿ ಹಡಗುಗಳಿಗೆ ಎದುರಾಗಬಹುದಾದ ಸಂಭಾವ್ಯ ಅಪಾಯಗಳನ್ನು ತಗ್ಗಿಸಲು ಅನುವು ಮಾಡಿಕೊಡಲಿದೆ.

><><><><><><><><><><><

ಹಾಸನದಲ್ಲಿನ ಹೃದಯಾಘಾತದ ಪ್ರಕರಣಗಳ ವಾಸ್ತಾವಾಂಶಗಳನ್ನು ಪತ್ತೆ ಹಚ್ಚಲು ವಿಶೇಷ ತನಿಖಾ ತಂಡವನ್ನು ರಚಿಸಲಾಗಿದ್ದು, ಮನೆ ಮನೆಗೆ ಭೇಟಿ ನೀಡಿ, ಮಾಹಿತಿ ಕಲೆ ಹಾಕಲಾಗುತ್ತಿದೆ. ಕಳೆದ ೪೦ ದಿನಗಳಲ್ಲಿ ೨೨ಕ್ಕೂ ಹೆಚ್ಚು ಮಂದಿ, ಅದರಲ್ಲೂ ಪ್ರಮುಖವಾಗಿ ಚಿಕ್ಕ ವಯಸ್ಸಿನವರು ಮೃತಪಟ್ಟಿದ್ದಾರೆ ಎಂಬ ವರದಿಗಳ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ನಿನ್ನೆ ಸಭೆ ನಡೆಸಿ, ತನಿಖಾ ತಂಡ ರಚಿಸಲು ನಿರ್ಧರಿಸಲಾಗಿದೆ. ಈಗಾಗಲೇ ರಾಜ್ಯ ಮಟ್ಟದಿಂದ ತಜ್ಞರ ಸಮಿತಿಯೊಂದನ್ನು ರಚಿಸಲಾಗಿದ್ದು, ಅಸಹಜ ಸಾವುಗಳ ಬಗ್ಗೆ ಅಧ್ಯಯನ ನಡೆಸಲು ಕ್ರಮ ಕೈಗೊಳ್ಳಲಾಗಿದೆ.ಈ ನಡುವೆ ಜಿಲ್ಲಾಡಳಿತ ರಚಿಸಿರುವ ತಂಡದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ, ಹಾಸನ ವೈದ್ಯಕೀಯ ಸಂಸ್ಥೆಯ ನಿರ್ದೇಶಕರು, ವೈದ್ಯಕೀಯ ಕಾಲೇಜಿನ ಮುಖ್ಯಸ್ಥರು, ಹೃದ್ರೋಗ ತಜ್ಞರಿದ್ದಾರೆ. ಸಮಿತಿ ಆಸ್ಪತ್ರೆಗೆ ಮತ್ತು ಮೃತಪಟ್ಟವರ ಮನೆಗಳಿಗೆ ಭೇಟಿ ನೀಡಿ, ಮಾಹಿತಿ ಕಲೆಹಾಕುತ್ತಿದೆ. ಜಿಲ್ಲಾ ಆರೋಗ್ಯಾಧಿಕಾರಿ ಎಚ್. ಅನಿಲ್ ಮಾತನಾಡಿ, ಒಂದೂವರೆ ತಿಂಗಳಿನಿಂದ ವರದಿಯಾಗುತ್ತಿರುವ ಅಸಹಜ ಸಾವುಗಳಿಗೆ ಕಾರಣ ತಿಳಿಯಲು ಪ್ರಾಥಮಿಕ ಹಂತದ ತನಿಖೆ ನಡೆಸಲಾಗುತ್ತಿದೆ. ನಿಗದಿತ ನಮೂನೆ ಪ್ರಶ್ನಾವಳಿಯಲ್ಲಿ ಮಾಹಿತಿ ಕಲೆ ಹಾಕಿ ಜಿಲ್ಲಾಡಳಿತಕ್ಕೆ ಶನಿವಾರದ ವೇಳೆಗೆ ವರದಿ ಸಲ್ಲಿಸಲಾಗುವುದು ಎಂದರು.

><><><><><><><><><><><

ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋದನಾ ಕೇಂದ್ರ - ಕೆ.ಎಂ.ಸಿ., ಆರ್.ಐ. ವೈದ್ಯರು ಸಂಶೋಧನೆ ಕೈಗೊಂಡಿದ್ದಾರೆ. ಚಿಕ್ಕ ಮಕ್ಕಳ ಹೃದಯಾಘಾತಕ್ಕೆ ದೈಹಿಕ ಶ್ರಮದ ಕೊರತೆ, ಸ್ಥೂಲಕಾಯ ಹಾಗೂ ಅತಿಯಾದ ಮೊಬೈಲ್ ಬಳಕೆ ಕಾರಣ ಎಂದು, ವರದಿ ತಿಳಿಸಿದೆ.ಧಾರವಾಡ ಜಿಲ್ಲೆಯ ೬ ಶಾಲೆಗಳ, ೮ ಮತ್ತು ೯ನೇ ತರಗತಿ ಓದುತ್ತಿರುವ, ತೂಕ ಹೆಚ್ಚಿರುವ ೩೦ ವಿದ್ಯಾರ್ಥಿಗಳನ್ನು, ತಪಾಸಣೆಗೆ ಒಳಡಿಸಿದಾಗ, ೨೬ ವಿದ್ಯಾರ್ಥಿಗಳ ದೇಹದಲ್ಲಿ ಅಸಹಜ ಬೆಳವಣಿಗೆ ಗುರುತಿಸಲಾಗಿದೆ. ಇಡೀ ದೇಶದಲ್ಲಿ ಪ್ರಥಮ ಬಾರಿಗೆ ಇಂತಹ ಸಂಶೋಧನೆ

ಕೈಗೊಳ್ಳಲಾಗಿದೆ ಎಂದು ಕೆ.ಎಂ.ಸಿ, ಆರ್.ಐ. ಆಸ್ಪತ್ರೆಯ, ಬಹು ವಿಭಾಗೀಯ ಸಂಶೋಧನಾ ಘಟಕದ ನೋಡಲ್ ಅಧಿಕಾರಿ, ಡಾಕ್ಟರ್ ರಾಮ ಕೌಲಗುಡ್ಡ ತಿಳಿಸಿದ್ದಾರೆ.

><><><><><><><><><><><

ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಅನ್ನಪೂರ್ಣ ದೇವಿ ಅವರು ಇಂದು ಜಾಖಂಡ್‌ನ ರಾಂಚಿಯಲ್ಲಿ ಸಾವಿತ್ರಿಬಾಯಿ ಫುಲೆ ರಾಷ್ಟ್ರೀಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಂಸ್ಥೆಯ ನೂತನ ಪ್ರಾದೇಶಿಕ ಕೇಂದ್ರವನ್ನು ಉದ್ಘಾಟಿಸಲಿದ್ದಾರೆ.ಈ ಹೊಸ ಕೇಂದ್ರವು ದೇಶದ ಪೂರ್ವ ಪ್ರದೇಶದಲ್ಲಿ ಸಾಮರ್ಥ್ಯ ವೃದ್ಧಿ ಪ್ರಯತ್ನಗಳ ವಿಕೇಂದ್ರೀಕರಣ ಮತ್ತು ಸೇವಾ ವಿತರಣೆಯನ್ನು ಸುಧಾರಿಸುವಲ್ಲಿ ಒಂದು ಪ್ರಮುಖ ಹೆಜ್ಜೆಯಾಗಿದೆ. ಇದು ಜಾಖಂಡ್, ಬಿಹಾರ, ಒಡಿಶಾ ಮತ್ತು ಪಶ್ಚಿಮ ಬಂಗಾಳದ ಕೇಂದ್ರೀಕೃತ ಗಮನದೊಂದಿಗೆ ಮಿಷನ್ ಶಕ್ತಿ , ಮಿಷನ್ ವಾತ್ಸಲ್ಯ, ಮಿಷನ್ ಸಕ್ಷಮ್, ಅಂಗನವಾಡಿ ಮತ್ತು ಪೋಷಣ್ ೨.೦ ನಂತಹ ಹಲವಾರು ಉಪಕ್ರಮಗಳ ತರಬೇತಿ ಮತ್ತು ಸಂಶೋಧನಾ ಅಗತ್ಯಗಳನ್ನು ನಿರ್ಧಿಷ್ಟವಾಗಿ ಪೂರೈಸುತ್ತದೆ.

><><><><><><><><><><><

ಲಂಡನ್‌ನಲ್ಲಿ ನಡೆಯುತ್ತಿರುವ ವಿಂಬಲ್ಡನ್ ಟೆನಿಸ್‌ನಲ್ಲಿ ಭಾರತದ ಶ್ರೀರಾಮ್ ಬಾಲಾಜಿ ಎರಡನೇ ಸುತ್ತಿಗೆ ಪ್ರವೇಶಿಸಿದರು.ಬಾಲಾಜಿ ಮತ್ತು ಅವರ ಮೆಕ್ಸಿಕನ್ ಪಾಲುದಾರ ಮಿಗುಯೆಲ್ ರೆಯೆಸ್-ವರೆಲಾ ಅವರು ಅಮೆರಿಕದ ಜೋಡಿಯಾದ ಲರ್ನರ್ ಟಿಯೆನ್ ಮತ್ತು ಅಲೆಕ್ಸಾಂಡರ್ ಕೊವಾಸೆವಿಕ್ ಅವರನ್ನು ಆರಂಭಿಕ ಸುತ್ತಿನ ಪಂದ್ಯದಲ್ಲಿ ೬-೪, ೬-೪ ಸೆಟ್‌ಗಳಿಂದ ಸೋಲಿಸಿದರು.ಮುಂದಿನ ಸುತ್ತಿನಲ್ಲಿ, ಬಾಲಾಜಿ ಮತ್ತು ರೆಯೆಸ್-ವರೆಲಾ ಅವರು ನಾಲ್ಕನೇ ಶ್ರೇಯಾಂಕಿತ ಸ್ಪೇನ್‌ನ ಮಾರ್ಸೆಲ್ ಗ್ರಾನೋಲ್ಲರ್ಸ್ ಮತ್ತು ಅರ್ಜೆಂಟೀನಾದ ಹೊರಾಸಿಯೊ ಜೆಬಲ್ಲೋಸ್ ಅವರನ್ನು ಎದುರಿಸಲಿದ್ದಾರೆ. ಬುಧವಾರ, ಯೂಕಿ ಭಾಂಬ್ರಿ ಮತ್ತು ರಿತ್ವಿಕ್ ಬೊಲ್ಲಿಪಾಲ್ ಅವರು ತಮ್ಮ ಆರಂಭಿಕ ಸುತ್ತಿನ ಪಂದ್ಯಗಳಲ್ಲಿ ಜಯಗಳಿಸಿ ಪುರುಷರ ಡಬಲ್ಸ್‌ನ ಎರಡನೇ ಸುತ್ತಿಗೆ ಪ್ರವೇಶಿಸಿದರು. ರೋಹನ್ ಬೋಪಣ್ಣ ಮೊದಲ ಸುತ್ತಿನಲ್ಲೇ ಪರಾಭವಗೊಂಡರು.

><><><><><><><><><><><

ಕ್ರೋವೇಷಿಯಾದಲ್ಲಿ ನಡೆದ ಸೂಪರ್ ಯುನೈಟೆಡ್ ರಾಪಿಡ್ ಅಂಡ್ ಬ್ಲಿಟ್ಜ್ ಪಂದ್ಯಾವಳಿಯ ರ್‍ಯಾಪಿಡ್ ವಿಭಾಗದ ಆರನೇ ಸುತ್ತಿನಲ್ಲಿ ವಿಶ್ವ ನಂ.೧ ಮತ್ತು ಐದು ಬಾರಿ ವಿಶ್ವಚಾಂಪಿಯನ್ ಮ್ಯಾಗ್ನಸ್ ಕಾರ್ಲ್ಸನ್ ಅವರನ್ನು ಪರಾಭವಗೊಳಿಸುವ ಮೂಲಕ ಭಾರತದ ವಿಶ್ವ ಚಾಂಪಿಯನ್ ಡಿ. ಗುಕೇಶ್ ಚೆಸ್ ಜಗತ್ತಿನಲ್ಲಿ ಮತ್ತೊಂದು ಸಂಚಲನ ಮೂಡಿಸಿದ್ದಾರೆ. ನಾರ್ವೆ ಚೆಸ್‌ನಲ್ಲಿ ಈ ವರ್ಷ ಕಾರ್ಲ್ಸನ್ ಅವರನ್ನು ಸೋಲಿಸಿದ ಕೆಲವು ದಿನಗಳ ನಂತರ, ಈ ಬಾರಿ ರ್‍ಯಾಪಿಡ್ ಚೆಸ್‌ನಲ್ಲಿ ಗುಕೇಶ್ ಮತ್ತೊಮ್ಮೆ ತಮ್ಮ ಸಾಮರ್ಥ್ಯ ಸಾಬೀತುಪಡಿಸಿದ್ದಾರೆ. ಚೆನ್ನೈನ ಗ್ರ್ಯಾಂಡ್‌ಮಾಸ್ಟರ್‌ಗೆ ಈ ಟೂರ್ನಿಯಲ್ಲಿ ಇದು ಸತತ ಐದನೇ ಗೆಲುವಾಗಿದ್ದು, ೧೦ ಅಂಕಗಳೊಂದಿಗೆ ಮುನ್ನಡೆ ಸಾಧಿಸಲು ನೆರವಾಗಿದೆ. ಜಾನ್-ಕ್ರಿಜ್ಟೋಫ್ ಡುಡಾ ವೆಸ್ಲಿ ಸೋ ೮ ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿದ್ದಾರೆ. ಕಳೆದ ವರ್ಷ ಸಿಂಗಾಪುರದಲ್ಲಿ ಗುಕೇಶ್, ಡಿಂಗ್ ಲಿರೆನ್ ಅವರನ್ನು ಸೋಲಿಸಿ ವಿಶ್ವ ಚಾಂಪಿಯನ್‌ಶಿಪ್ ಪ್ರಶಸ್ತಿಯನ್ನು ಗೆದ್ದಿದ್ದರು.

><><><><><><><><><><><

ಮಾಹಿತಿ ಮತ್ತು ಪ್ರಸಾರ ಸಚಿವಾಲಯವು ೨೦೧೪ ರಲ್ಲಿ ಹೊರಡಿಸಲಾದ ಟೆಲಿವಿಷನ್ ರೇಟಿಂಗ್ ಏಜೆನ್ಸಿಗಳ ನೀತಿ ಮಾರ್ಗಸೂಚಿಗಳಿಗೆ ತಿದ್ದುಪಡಿಗಳನ್ನು ಪ್ರಸ್ತಾಪಿಸಿದೆ.ಪ್ರಸ್ತಾವಿತ ಕರಡು ಮಾಧ್ಯಮ ಸಂಸ್ಥೆಗಳಿಗೆ ಕೆಲವು ನಿಬಂಧಿತ ನಿಬಂಧನೆಗಳನ್ನು ತೆಗೆದುಹಾಕಿದೆ. ಇದರಿಂದಾಗಿ ದೇಶದಲ್ಲಿ ವಿದ್ಯುನ್ಮಾನ ವಾಹಿನಿಗಳ ವೀಕ್ಷಕರ ಮಾಪನ ವ್ಯವಸ್ಥೆಯನ್ನು ಪ್ರಜಾಪ್ರಭುತ್ವಗೊಳಿಸಲು ಮತ್ತು ಆಧುನೀಕರಿಸಲು ಅವಕಾಶ ನೀಡುತ್ತದೆ. ಪ್ರಸ್ತುತ, ಪ್ರಸಾರ ವೀಕ್ಷಕರ ಸಂಶೋಧನಾ ಮಂಡಳಿ ಟಿವಿ ರೇಟಿಂಗ್‌ಗಳನ್ನು ಒದಗಿಸುವ ಏಕೈಕ ಸಂಸ್ಥೆಯಾಗಿದೆ. ಪ್ರಸ್ತಾವಿತ ತಿದ್ದುಪಡಿಗಳು ಆರೋಗ್ಯಕರ ಸ್ಪರ್ಧೆಯನ್ನು ಬೆಳೆಸಲು, ಹೊಸ ತಂತ್ರಜ್ಞಾನಗಳನ್ನು ತರಲು ಮತ್ತು ವಿಶೇಷ ವಾಗಿ ಹೆಚ್ಚು ವಿಶ್ವಾಸಾರ್ಹ ಮತ್ತು ಪ್ರಾತಿನಿಧಿಕ ದತ್ತಾಂಶವನ್ನು ಒದಗಿಸಲು ಅವಕಾಶ ನೀಡುವ ಗುರಿ ಹೊಂದಿದೆ.

><><><><><><><><><><><